(*b*) the tanks for which feeder channels are constructed in the said taluks;

(*c*) the tanks in respect of which general survey is conducted for repairing them in the abovesaid taluks ?

A.—**Sri Kadidal MANJAPPA** (Minister for Revenue and Public Works).—

Bangalore North Taluk.—

(*a*) Addeviswanathapura.
(*b*) Hennur.
(*c*) Ganagondanahalli.
Hundarahalli.
Nagarbhavi.

Devanahalli Taluk—

Guduvanahalli.
Vadigenahalli.
Tarathanahalli.
Sudhahalli.
Solur.

ಶ್ರೀ ಕೆ. ವಿ. ಬೈರೇಗೌಡ.—ಬೆಂಗಳೂರು ಉತ್ತರ ತಾಲ್ಲೂಕು ಮತ್ತು ದೇವನಹಳ್ಳಿ ತಾಲ್ಲೂಕುಗಳಲ್ಲಿರ ತಕ್ಕಂಥ ಎರ್ಲಾ ಮೇಜರ್ ಕೆರೆಗಳೂ ಇದರಲ್ಲಿ ಸೇರಿರುತ್ತವೆಯೇ ?

***Sri Kadidal MANJAPPA.**—I want notice.

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿ ತಾಲ್ಲೂಕಿನಲ್ಲಿ ತಟ್ಟೆಮಾಚನಹಳ್ಳಿ ಕೆರೆಗೆ ಏಕೆ ಫೀಡರ್‌ಛಾನಲ್ ಅನ್ನು ತಾವು ಮಾಡಲಿಲ್ಲ ?

ಶ್ರೀ ಕಡಿದಾಳ್ ಮಂಜಪ್ಪ.—ಅದರ ವಿಚಾರ ನನಗೆ ನೆನಪಿಲ್ಲ. ತಾವು ಒಂದು ಅರ್ಜಿ ಬರೆದು ಕಳುಹಿಸಿ ಕೊಟ್ಟರೆ ಅದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀ ಕೆ. ವಿ. ಬೈರೇಗೌಡ.—ಈ ಎರಡು ತಾಲ್ಲೂಕುಗಳಲ್ಲಿ ರಿಪೇರಿಗೆ ತೆಗೆದುಕೊಂಡಿರುವುದು ಬಹಳ ಕಡಮೆ, ಇನ್ನೂ ಅನೇಕ ಕೆರೆಗಳು ರಿಪೇರಿಯಾಗಬೇಕೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

Mr. SPEAKER.—It has been stated that a number of tanks have to be repaired. It is a matter of both time and money.

Dyavasandra Tank Work, Gauribidanur Taluk.

Q.—529. **Sri A. MUNIYAPPA** (Sidlaghatta - Chikballapur—Scheduled Castes).—

Will the Government be pleased to state :—

(*a*) the amount spent on Dyavasandra tank work, Gauribidnur Taluk ;

(*b*) whether the revetment constructed to the 12th and 18th grades is an old one reconstructed or a new construction :

(*c*) whether the previous engineer had noted that old stones should not be used for the work ;

(*d*) whether it is a fact that stones which are unfit for the construction have been used ?

A.—**Sri Kadidal MANJAPPA** (Minister for Revenue and Public Works).—

(*a*) Rs. 1,93,532 up to end of January 1955.

(*b*) Revetment is newly constructed using both old and new stones.

(*c*) No.

(*d*) No.

ಶ್ರೀ ಎ. ಮುನಿಯಪ್ಪ.—ದ್ಯಾವಸಂದ್ರ ಕೆರೆಗೆ ಎಷ್ಟು ಅಂದಾಜಾಗಿದೆ ?

***Sri Kadidal MANJAPPA.**—The estimate is for one lakh and odd. I want notice for giving the exact figure.

ಶ್ರೀ ಎ. ಮುನಿಯಪ್ಪ.—1,93,532 ರೂಪಾಯಿ ಖರ್ಚಾಗಿದೆ ಎಂದು ಹೇಳಿದ್ದೀರಿ, ಇನ್ನೂ ಎಷ್ಟು ಖರ್ಚಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎ. ಮುನಿಯಪ್ಪ.—12 ಮತ್ತು 18ನೆಯ ಗ್ರೇಡಿನಲ್ಲಿ ರಿವೆಟ್‌ಮೆಂಟ್ ಕಟ್ಟುವುದಕ್ಕೆ ಪಾಯ ಎಷ್ಟು ಹಾಕಿದ್ದಾರೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಇದನ್ನು ಹೇಳುವುದು ಕಷ್ಟ.

ಶ್ರೀ ಎ. ಮುನಿಯಪ್ಪ.—12 ಮತ್ತು 18ನೆಯ ಗ್ರೇಡಿನಲ್ಲಿ ಪಾಯ ಸರಿಯಾಗಿ ತೆಗೆಯದೆ ಕಟ್ಟಿರುವುದು ಗೊತ್ತಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಸರಿಯಾಗಿ ತೆಗೆದಿಲ್ಲವೆಂದು ಮಾನ್ಯ ಸದಸ್ಯರೇ ನನಗೆ ಒಂದು ಸಾರಿ ತಿಳಿಸಿದರು.

ಶ್ರೀ ಎ. ಮುನಿಯಪ್ಪ.—ಮುಂಗಾರು ಮಳೆಯಲ್ಲಿ ಹೆಚ್ಚಿಗೆ ನೀರು ಬಂದಾಗ ಪಾಯ ಸರಿಯಾಗಿಲ್ಲದಿದ್ದರೆ ಅಪಾಯವಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ಕೂಡ ಮಾನ್ಯ ಸದಸ್ಯರೇ ನನ್ನ ಗಮನಕ್ಕೆ ತಂದಿದ್ದಾರೆ.

ಶ್ರೀ ಜಿ. ಪಾಪಣ್ಣ.—ಅಲ್ಲಿ ರಿವೆಟ್‌ಮೆಂಟನ್ನು ಹೊಸ ಕಲ್ಲುಗಳಿಂದ ಕಟ್ಟಿದ್ದಾರೋ ಅಥವಾ ಹೊಸದು ಹಳೆಯದನ್ನು ಮಿಶ್ರಮಾಡಿ ಕಟ್ಟಿದ್ದಾರೊ ?

ಶ್ರೀ ಕಡಿದಾಳ್ ಮಂಜಪ್ಪ.—ಮಿಶ್ರಮಾಡಿ ಕಟ್ಟಿದ್ದಾರೆಂದು ನನ್ನ ನೆನಪು.

ಶ್ರೀ ಜಿ. ಪಾಪಣ್ಣ.—ಇದನ್ನು ಹೇಗೆ ಅಂದಾಜು ಮಾಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ಅಂದಾಜು ಮಾಡುವುದು ಸುಲಭ.